# ಕರ್ನಾಟಕ ಸರ್ಕಾರ
## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು
ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

**Email Id: adpiqsection@gmail.com** **Phone No: 080-23460525**


**ಸಂಖ್ಯೆ: ಕ್ಯೂ1/ಡಿ.ಇಎಲ್.ಇಡಿ/ಪೂ.ಪ./ನವೆಂ-2021/19/2021-22** **ದಿನಾಂಕ:26/10/2021**

## ಅಧಿಸೂಚನೆ

ವಿಷಯ:- ಡಿಸೆಂಬರ್-2021ರ ಮಾಹೆಯಲ್ಲಿ ನಡೆಯಲಿರುವ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪೂರಕ ಪರೀಕ್ಷೆಗೆ (Only Theory) ರಾಜ್ಯದ ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಇಡಿ.218.ಎಸ್.ಎಲ್.ಬಿ.2016;ಬೆಂಗಳೂರು; ದಿನಾಂಕ:14.12.2016.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಕರ್ನಾಟಕ ಪ್ರಾಥಮಿಕ ಶಿಕ್ಷಕರ ಶಿಕ್ಷಣ ಪಠ್ಯಕ್ರಮ ಪರಿಷ್ಕೃತ 2016 ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಷನ್ ಡಿ.ಎಲ್.ಎಡ್ ನಿಯಮಗಳಿಗೆ ನೀಡಿರುವ ಸ್ಪಷ್ಟೀಕರಣ ಪತ್ರ ಸಂಖ್ಯೆ: ಶಿತ1/ಡಿ.ಎಲ್.ಎಡ್/ಪ.ನಿ/01/2016-17; ದಿನಾಂಕ:30.01.2017ರ ಸ್ಪಷ್ಟೀಕರಣ.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರ ಸುತ್ತೋಲೆ ಸಂಖ್ಯೆ:ಶಿತ2/ಡಿಪಿಐ/ಡಿಎಸ್ಇಆರ್‌ಟಿ/ಡಿ.ಇಡಿಕಾ/01/2018/27008/16; ದಿನಾಂಕ:17.05.2018.

************

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ 2020-21ನೇ ಸಾಲಿನ ಡಿ.ಇಎಲ್.ಇಡಿ ಪೂರಕ ಪರೀಕ್ಷೆಗೆ Online ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಪರೀಕ್ಷಾ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಸರ್ಕಾರಿ ಡಿ.ಇಎಲ್.ಇಡಿ ಸಂಸ್ಥೆಗಳು ಹಾಗೂ ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ನಿಯಮಾನುಸಾರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಡಿ.ಇಡಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಅಭ್ಯರ್ಥಿಗಳು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುತ್ತಾರೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಹಾಜರಾಗುವ ಅರ್ಹ ಅನುತ್ತೀರ್ಣ ಅಭ್ಯರ್ಥಿಗಳ ವಿವರಗಳನ್ನು ಅರ್ಜಿ ನಮೂನೆಯಲ್ಲಿ ಮಂಡಳಿಯ https://sslc.karnataka.gov.in ಜಾಲತಾಣದಲ್ಲಿ Login/Other Exams/D.El.Ed Examination ನಲ್ಲಿ Institute Login ಮೂಲಕ Upload ಮಾಡಲು ಸೂಚಿಸಿದೆ.

1. ಪರೀಕ್ಷಾ ಶುಲ್ಕದ ವಿವರ:-

**ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಪ್ರವರ್ಗ-1ರ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇದ್ದು ಲ್ಯಾಮಿನೇಷನ್ ಶುಲ್ಕವನ್ನು ಪಾವತಿಸುವಂತಿಲ್ಲ ಆದರೆ ದಂಡ ಶುಲ್ಕದಿಂದ ವಿನಾಯಿತಿ ಇರುವುದಿಲ್ಲ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ಜಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು.**

**ಹಾಗೂ /ಪ್ರವರ್ಗ1 ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ರೂ. 1.00 ಲಕ್ಷದವರೆಗಿನ ಆದಾಯಮಿತಿ ಹೊಂದಿರಬೇಕು. ಅದಕ್ಕೆ ಸಂಬಂಧಿಸಿದ ಜಾತಿ ಮತ್ತು ಆದಾಯ ಪ್ರಮಾಣಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು. ಶುಲ್ಕ ವಿನಾಯಿತಿ ಬಯಸುವ ಅಭ್ಯರ್ಥಿಗಳ ಶುಲ್ಕ ವಿನಾಯಿತಿ ಮೊಬಲಗನ್ನು ಹಿಂದಿನ ಸಾಲುಗಳಂತೆ ಸಂಬಂಧಿಸಿದ ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಇಲಾಖೆಯಿಂದ ಶುಲ್ಕ ಮರುಪಾವತಿ ಪಡೆದು ಮಂಡಳಿಯ ಖಾತೆಗೆ ನೆಫ್ಟ್ ಚಲನ್ ಮೂಲಕ ಪಾವತಿಸಿ ಮೂಲ ಚಲನ್‌ನನ್ನು ಮಂಡಳಿಗೆ ಸಲ್ಲಿಸಬೇಕು.**

### 1.1 ಪುನರಾವರ್ತಿತ ಅಭ್ಯರ್ಥಿಗಳಿಗೆ

| **ಕ್ರಮ ಸಂಖ್ಯೆ** | **ಪರೀಕ್ಷೆ** | **ಒಟ್ಟು ಶುಲ್ಕ** |
|---|---|---|
| 01 | ಒಂದು ವಿಷಯಕ್ಕೆ | 300–00 |
| 02 | ಎರಡು ವಿಷಯಗಳಿಗೆ | 600–00 |
| 03 | ಮೂರು ಅಥವಾ ಮೂರಕ್ಕಿಂತ ಹೆಚ್ಚು ವಿಷಯಗಳಿಗೆ | 1080–00 |

### 2. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ

- ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯನ್ನು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಮಂಡಳಿಯ ಜಾಲತಾಣದಲ್ಲಿ, ತಮ್ಮ ಸಂಸ್ಥೆಯ Login ಮೂಲಕ Upload ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಸ್ಥೆವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಸದರಿ ಚಲನ್ ಅನ್ನು Login ನಿಂದ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ ನಿಗದಿತ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು.
- ಆನ್‌ಲೈನ್ ಚಲನ್ ಹೊರತುಪಡಿಸಿ ಮತ್ತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಅಭ್ಯರ್ಥಿಗಳ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.
- ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗಿದ್ದು, ಆನ್‌ಲೈನ್ ಮೂಲಕ ಪಾವತಿಸಿದಲ್ಲಿ ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿಯನ್ನು ಅರ್ಜಿಯ ಜೊತೆಯಲ್ಲಿ ಸಲ್ಲಿಸಬೇಕು.
- **ಮಂಡಳಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದಲ್ಲಿ ಆ ದಿನದ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.**

### 3. ಪೂರಕ ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ.

| ಕ್ರ.ಸಂ | ವಿವರ | ದಿನಾಂಕ: |
|---|---|---|
| 1 | ಅಧಿಸೂಚನೆ ಪ್ರಕಟಿಸುವ ದಿನಾಂಕ | 10/11/2021 |
| 2 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭ ದಿನಾಂಕ | 10/11/2021 |
| 3 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 20/11/2021 |
| 4 | ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ (ದಿನ ಒಂದಕ್ಕೆ ರೂ.150/-ರಂತೆ) ಪಾವತಿಸಲು ಕೊನೆಯ ದಿನಾಂಕ | 23/11/2021 |
| 5 | ಡಿಸೆಂಬರ್-2021 ರ ಡಿಇಎಲ್ಇಡಿ ಪೂರಕ ಪರೀಕ್ಷೆಗೆ ಆನ್‌ಲೈನ್ ಚಲನ್ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 24/11/2021 |
| 6 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಸಂಸ್ಥೆಗಳಿಂದ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 25/11/2021 |
| 7 | ಡಯಟ್‌ನಿಂದ ಅರ್ಜಿಗಳನ್ನು ಅನುಮೋದಿಸಲು ಕೊನೆಯ ದಿನಾಂಕ | 27/11/2021 |
| 8 | ಪ್ರವೇಶ ಪತ್ರಗಳನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | 02/12/2021 |
| 9 | ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಎ.ಎಂ.ಎಲ್ ಮತ್ತು ಸಿಎನ್ಆರ್ ಮತ್ತು ನಾಮಿನಲ್‌ರೋಲ್‌ಗಳನ್ನು ಆನ್‌ಲೈನ್‌ಅಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | 07/12/2021 |

### 4. ಪೂರಕ ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:

1 ಡಿಸೆಂಬರ್-2021ರ ಡಿಇಎಲ್ಇಡಿ ಪೂರಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೊಂದಣಿ ಮಾಹಿತಿಯನ್ನು ಮಂಡಳಿಯ ಜಾಲತಾಣದಲ್ಲಿ Login/Other Exams/DEled Examination ನಲ್ಲಿ ಈ ಹಿಂದೆ ನೀಡಿರುವ ನೋಂದಣಿ ಸಂಖ್ಯೆಯನ್ನು ನಮೂದಿಸುವ ಮೂಲಕ ಮಾಹಿತಿಗಳನ್ನು Upload ಮಾಡಲು ಸೂಚಿಸಿದೆ.

2 ಡಿ.ಇಎಲ್.ಇಡಿ ಪೂರಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ಅಭ್ಯರ್ಥಿಗಳ (ಎಂ.ಎಸ್.ಎ) ಪೂರಕ ಪರೀಕ್ಷೆಯ ಅರ್ಜಿಗಳು **AUTO FETCH** ಆಗುತ್ತವೆ.

3 ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಜಾಲಾತಾಣದಲ್ಲಿ ಸಂಸ್ಥೆಯ ಲಾಗಿನ್‌ಮೂಲಕ ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳ ನೇರಭಂಗಿಯ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ. **ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು. ಭಾವಚಿತ್ರ ಅಂಟಿಸಿರುವ ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವಂತಿಲ್ಲ.**

4 ಆನ್‌ಲೈನ್‌ನಲ್ಲಿ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡುವಾಗ ನೈಜ ಅಭ್ಯರ್ಥಿಯ ಬದಲು ಬೇರೆ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದರೆ ಅಂತಹ ಸಂಸ್ಥೆಯ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೆ, ಖಾತ್ರಿಪಡಿಸಿಕೊಳ್ಳದೆ, ಯಥಾವತ್ತಾಗಿ ಅನುಮೋದಿಸಿದರೆ ಸಂಸ್ಥೆಯವರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

5 ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಪೋನ್ ಸಂಖ್ಯೆ ಹಾಗೂ E-Mail ವಿಳಾಸ ತಪ್ಪದೆ ನಮೂದಿಸುವುದು.

6 ಮಂಡಳಿಯ ಗಮನಕ್ಕೆ ತರದೇ ಅಭ್ಯರ್ಥಿಗಳ ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶ ಇರುವುದಿಲ್ಲ.

7 ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಯಾದಿ ಪಟ್ಟಿಯನ್ನು (Nominal Roll) Download ಮಾಡಿಕೊಂಡು ಪರಿಶೀಲಿಸಿ ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಡಯಟ್‌ಗೆ ಸಲ್ಲಿಸುವುದು.

8 ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಡಿಇಎಲ್ಇಡಿ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

**5. ಪರೀಕ್ಷಾ ಅವ್ಯವಹಾರಗಳಿಂದ ಉಚ್ಚಾಟಿಸಿರುವ (ಎಂ.ಎಲ್.ಪಿ) ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪರೀಕ್ಷೆಯಲ್ಲಿ ಅವ್ಯವಹಾರಗಳನ್ನು ನಡೆಸಿ ಉಚ್ಚಾಟನೆಗೊಂಡಿರುವ ಅಭ್ಯರ್ಥಿಗಳ ಉಚ್ಚಾಟನಾ ವರ್ಷಗಳ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಆ ಅಭ್ಯರ್ಥಿಗಳು ಡಿಸೆಂಬರ್-2021ರ ಪೂರಕ ಪರೀಕ್ಷೆ ಬರೆಯಲು ಅರ್ಹರಿದ್ದಲ್ಲಿ, ಎಂ.ಎಲ್.ಪಿ ಪ್ರಕರಣವೆಂದು ಪ್ರತ್ಯೇಕವಾಗಿ ನಾಮಿನಲ್‌ರೋಲ್‌ನ್ನು ನೇರವಾಗಿ ಡಯಟ್ ಮೂಲಕ ಮಂಡಳಿಗೆ ಸಲ್ಲಿಸುವುದು. ಮಂಡಳಿಯಿಂದ ಹೊರಡಿಸಿರುವ ಜ್ಞಾಪನ ಆದೇಶದ ಪ್ರತಿ ಲಗತ್ತಿಸುವುದು. ಈ ರೀತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಂಡಳಿಯಿಂದ ಪ್ರತ್ಯೇಕವಾಗಿ Online ಅರ್ಜಿ Upload ಮಾಡಲಾಗುವುದು..

**6. ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಮತ್ತು ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ:-**

ವಿಭಿನ್ನ ಸಾಮರ್ಥ್ಯವುಳ್ಳ (Differently Abled) ವಿಕಲಚೇತನ ಅಭ್ಯರ್ಥಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಇಡಿ98/ಇಎಸ್‌ಡಬ್ಲ್ಯೂ2009 ದಿನಾಂಕ:10.06.2009ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಅಂಗವೈಕಲ್ಯತೆ ಹೊಂದಿರುವ ಅಭ್ಯರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಮತ್ತು ಬರಹಗಾರರ ಸೌಲಭ್ಯಗಳನ್ನು ನೀಡುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಕ್ರಮಕೈಗೊಳ್ಳುವುದು. ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಯಾವುದೇ ವ್ಯತ್ಯಾಸವಾದಲ್ಲಿ ಜಿಲ್ಲಾ ಡಯಟ್ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಲಾಗುವುದು.

**7. ಪ್ರಯತ್ನಗಳ ಮಿತಿ:-**

| ಕ್ರಮ ಸಂಖ್ಯೆ | ದ್ವಿತೀಯ ಡಿ.ಇಎಲ್.ಇಡಿ ವ್ಯಾಸಂಗ ಮಾಡಿದ ಶೈಕ್ಷಣಿಕ ವರ್ಷದ ಮುಖ್ಯ ಪರೀಕ್ಷೆ | ಅಂತಿಮ ಕಾಲಾವಕಾಶ/ಅಂತಿಮ ಪ್ರಯತ್ನ |
|---|---|---|
| 01 | ಮೇ-ಜೂನ್ 2019 | ಡಿಸೆಂಬರ್ 2021 |
| 02 | ಮೇ-ಜೂನ್ 2020 | ಡಿಸೆಂಬರ್ 2022 |

**ಜೂನ್-2019ರಲ್ಲಿ ದ್ವಿತೀಯ ಡಿ.ಇಎಲ್.ಇಡಿ ಪಠ್ಯವಸ್ತುವಿನಂತೆ ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ಡಿಸೆಂಬರ್ 2021ರ ಪರೀಕ್ಷೆ ಅಂತಿಮ ಅವಕಾಶವಾಗಿದೆ. ಈ ವಿಚಾರವನ್ನು ಅಭ್ಯರ್ಥಿಗಳ ಮತ್ತು ಪೋಷಕರ ಗಮನಕ್ಕೆ ತಂದು ಅಂತಿಮ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸುವುದು. ಅಂತಿಮ ಕಾಲಾವಕಾಶದ ಬಗ್ಗೆ ಮನದಟ್ಟು ಮಾಡುವುದು. ವ್ಯಾಪಕ ಪ್ರಚಾರ ಮಾಡುವುದು. ಆಯಾ ಸಂಸ್ಥೆಯ ಆಧ್ಯ ಕರ್ತವ್ಯವಾಗಿರುತ್ತದೆ.**

**8. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ನೀಡಿದ್ದು, ಫಲಿತಾಂಶ ಉತ್ತಮಪಡಿಸಿಕೊಳ್ಳಲು ವಿಫಲರಾದವರ ಬಗ್ಗೆ:-**

ಪ್ರಥಮ ಭಾರಿಗೆ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅಭ್ಯರ್ಥಿಯು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಂತಹ ಅಭ್ಯರ್ಥಿಗಳಿಗೆ ಪರೀಕ್ಷೆಬರೆಯಲು ಅನುಮತಿ ನೀಡಿದ್ದು

ಫಲಿತಾಂಶ ಉತ್ತಮಪಡಿಸಿಕೊಳ್ಳುವಲ್ಲಿ ವಿಫಲರಾದ ಅಭ್ಯರ್ಥಿಗಳು ಪುನಃ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿಲ್ಲವೆಂದು ಮಂಡಳಿಯು ಈಗಾಗಲೇ ಸ್ಪಷ್ಟಪಡಿಸಿದೆ. ಆದಾಗ್ಯೂ ಕೆಲವೊಂದು ಸಂಸ್ಥೆಗಳ ಮುಖ್ಯಸ್ಥರು ಅಭ್ಯರ್ಥಿಗಳನ್ನು ತಪ್ಪುದಾರಿಗೆ ಎಳೆದು ಪೂರಕ ಪರೀಕ್ಷೆಗೆ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಪರೀಕ್ಷಾ ಅರ್ಜಿ ಕಳುಹಿಸಿರುವ ಪ್ರಕರಣಗಳಿದ್ದು ಅಂತಹ ಯಾವುದೇ ಅರ್ಜಿಗಳನ್ನು ಮಂಡಳಿಯು ಪರಿಗಣಿಸುವುದಿಲ್ಲ. ಒಂದು ವೇಳೆ ಫಲಿತಾಂಶ ಉತ್ತಮಪಡಿಸಿಕೊಳ್ಳುವಲ್ಲಿ ವಿಫಲರಾಗಿ ಅರ್ಜಿ ಕಳುಹಿಸಿರುವ ಅಭ್ಯರ್ಥಿಗಳನ್ನು ಪರೀಕ್ಷೆಗೆ ಕೂರಿಸಿದಲ್ಲಿ ಅಂತಹವರ ಫಲಿತಾಂಶ ರದ್ದುಗೊಳಿಸುವುದರ ಜೊತೆಗೆ ಸಂಸ್ಥೆಯ ಮುಖ್ಯಸ್ಥರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು.

9. **ಡಯಟ್ ಪ್ರಾಂಶುಪಾಲರ ಮತ್ತು ನೋಡಲ್ ಅಧಿಕಾರಿಗಳ ಕರ್ತವ್ಯಗಳು ಹಾಗೂ ಗಮನಿಸಬೇಕಾದ ಅಂಶಗಳು:–**

- ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಡಿ.ಇಎಲ್.ಇಡಿ ಕಾಲೇಜುಗಳು ಸಲ್ಲಿಸಿರುವ ಪೂರಕ ಪರೀಕ್ಷೆಯ ನಾಮಯಾದಿ ಪಟ್ಟಿಯನ್ನು ತಮ್ಮ ಹಂತದಲ್ಲಿ ರಕ್ಷಿಸಿಡುವುದು ಹಾಗೂ ಮಂಡಳಿಯಿಂದ ಕೇಳಿದಾಗ ಅದನ್ನು ಮಂಡಳಿಗೆ ಸಲ್ಲಿಸುವುದು. ಡಯಟ್ ಹಂತದಲ್ಲಿ ಕಾಲೇಜುಗಳಿಂದ ಸ್ವೀಕರಿಸಲಾದ ಪರೀಕ್ಷಾ ಶುಲ್ಕದ ಚಲನ್‌ಗಳನ್ನು ಪರಿಶೀಲಿಸಿ ಚಲನ್‌ಗಳನ್ನು ಕ್ರೋಢೀಕರಿಸಿ ಮಂಡಳಿಗೆ ಕಳುಹಿಸುವುದು.
- ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಡಯಟ್ ಹಂತದಲ್ಲಿ ಪರಿಶೀಲಿಸಿ ಸಂಸ್ಥೆಯ Login ನಲ್ಲಿ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಮಂಡಳಿಯಿಂದ ಸೂಚಿಸಲ್ಪಟ್ಟ ನಿಗದಿತ ದಿನದೊಳಗೆ ಡೌನ್‌ಲೋಡ್ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಕ್ರಮವಹಿಸುವುದು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ಡಯಟ್ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಮುಖ್ಯಸ್ಥರು ಅಗತ್ಯ ಕ್ರಮವಹಿಸಲು ತಿಳಿಸಿದೆ.

**ವಿಶೇಷ ಸೂಚನೆ:–**

1. **ಅನುತ್ತೀರ್ಣ ಅಭ್ಯರ್ಥಿಗಳು ಮರುಎಣಿಕೆ/ಮರುಮೌಲ್ಯಮಾಪನ ಫಲಿತಾಂಶಕ್ಕಾಗಿ ನಿರೀಕ್ಷಿಸದೇ ಪರೀಕ್ಷಾ ಶುಲ್ಕ ಮತ್ತು ಪರೀಕ್ಷಾ ಅರ್ಜಿಯನ್ನು ನಿಗಧಿತ ಸಮಯದಲ್ಲಿ ಸಲ್ಲಿಸುವುದು.** ಒಂದು ವೇಳೆ ಮರುಎಣಿಕೆ ಅಥವಾ ಮರುಮೌಲ್ಯಮಾಪನದಲ್ಲಿ ಗಳಿಸಿದ ಪರಿಷ್ಕೃತ ಅಂಕಗಳಂತೆ, ಅಭ್ಯರ್ಥಿಯು ಉತ್ತೀರ್ಣರಾದಲ್ಲಿ, ಅಂತಹ ವಿದ್ಯಾರ್ಥಿಗಳು ಮುಂದೆ ಪರೀಕ್ಷೆಗೆ ಹಾಜರಾಗುವಂತಿಲ್ಲ. ಆದಾಗ್ಯೂ ಅಭ್ಯರ್ಥಿಯು ಪರೀಕ್ಷೆಗೆ ಹಾಜರಾದಲ್ಲಿ, ಅಂತಹ ಫಲಿತಾಂಶವನ್ನು ಮಂಡಳಿಯು ರದ್ದುಗೊಳಿಸುವುದು.
2. **ಪೂರಕ ಪರೀಕ್ಷೆಯನ್ನು ಕೇವಲ ಥಿಯರಿ (Theory) ವಿಷಯಗಳಿಗೆ ಮಾತ್ರ ನಡೆಸಲಾಗುವುದು. ಆಂತರಿಕ, ಬೋಧನಾ ಅಭ್ಯಾಸ ಪರೀಕ್ಷೆಗಳನ್ನು ಮುಖ್ಯ ಪರೀಕ್ಷೆಯಲ್ಲಿ ಮಾತ್ರ ನಡೆಸಲಾಗುವುದು. ಆದ್ದರಿಂದ ಬಾಹ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು, ಆಂತರಿಕ, ಬೋಧನಾ ಅಭ್ಯಾಸ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ, ಪರೀಕ್ಷಾ ಶುಲ್ಕ ಡಿಸೆಂಬರ್–2021ರ ಪೂರಕ ಪರೀಕ್ಷೆಗೆ ಸಲ್ಲಿಸಬಾರದು. ಮುಂಬರುವ ಮುಖ್ಯ ಪರೀಕ್ಷೆಗೆ ಪರೀಕ್ಷಾ ಅರ್ಜಿ ಸಲ್ಲಿಸುವುದು.**

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಅಭ್ಯರ್ಥಿಗಳ ಗಮನಕ್ಕೆ ತಂದು, ಪರೀಕ್ಷಾ ಅರ್ಜಿಗಳು ನಿಯಮಾನುಸಾರ ಇರುವುದನ್ನು ಪರಿಶೀಲಿಸಿದ ನಂತರವೇ ಆಯಾ ಡಯಟ್ ಪ್ರಾಂಶುಪಾಲರಿಗೆ ಸಲ್ಲಿಸಲು ರಾಜ್ಯದ ಎಲ್ಲಾ ಡಿ.ಇಡಿ ಕಾಲೇಜುಗಳ

ಪ್ರಾಂಶುಪಾಲರುಗಳಿಗೆ ಸೂಚಿಸಿದೆ. ಮೇಲ್ಕಂಡಂತೆ ಸಲ್ಲಿಸಿರುವ ಪರೀಕ್ಷಾ ಅರ್ಜಿಗಳು ನಿಯಮಾನುಸಾರ ಇರುವ ಬಗ್ಗೆ, ನಿಗದಿತ ಶುಲ್ಕ ಪಾವತಿಸಿರುವ ಬಗ್ಗೆ ಪರಿಶೀಲಿಸಿದ ನಂತರವೇ ಡಯಟ್ ಹಂತದಲ್ಲಿ ಅನುಮೋದಿಸಲು ಡಯಟ್ ಪ್ರಾಂಶುಪಾಲರಿಗೆ ತಿಳಿಸಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ**

1. **ಶ್ರೀಮತಿ, ಟಿ.ಡಿ.ಶೈಲ ಸಹಾಯಕ ನಿರ್ದೇಶಕರು, ಡಿಇಡಿ ಶಾಖೆ, ಮೊಬೈಲ್ ಸಂಖ್ಯೆ:9480343741**
2. **ಶ್ರೀ, ರಿಯಾಜ್, ಸಹಾಯಕ ನಿರ್ದೇಶಕರು, ಗಣಕಶಾಖೆ ಮೊಬೈಲ್ ಸಂಖ್ಯೆ:7892195954**

29/10/2021

(ಎಸ್.ಗೀತಾ)
ನಿರ್ದೇಶಕರು
(ಇತರೆ ಪರೀಕ್ಷೆಗಳು)
ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು

**ಪ್ರತಿಗಳು :-**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.
3. ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗರವರಿಗೆ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
5. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
6. ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಪ್ರತಿ.